<u>ಅಸಲು ದಾವಾ</u>- 284/2013 ಡಿ.ಡಬ್ಲ್ಯೂ- 4

ದಿನಾಂಕ 17.02.2026 ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಭೋಧಿಸಲಾಯಿತು.

<u>ಪಾಟೀ ಸವಾಲು- ವಾದಿ ಪರ ಶ್ರೀ.ಕೆ ಪಿ ಓ ಪರ ಹೆಚ್ ಜಿ ಬಿ ವಕೀಲರಿಂದ</u>

ಪಾಟೀ ಸವಾಲು ಏನು ಇಲ್ಲ ಎಂದು ತಿಳಿಸಿದ ಮೇರೆಗೆ ಪಾಟೀ ಸವಾಲು ಏನು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

<u>ಪಾಟೀ ಸವಾಲು- 2 ನೇ ಪ್ರತಿವಾದಿ ಪರ ಶ್ರೀ.ಕೆ ಟಿ ಪಿ ವಕೀಲರಿಂದ</u>

ಪಾಟೀ ಸವಾಲು ಏನು ಇಲ್ಲ ಎಂದು ತಿಳಿಸಿದ ಮೇರೆಗೆ ಪಾಟೀ ಸವಾಲು ಏನು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

<u>ಪಾಟೀ ಸವಾಲು- 1(ಎ ಯಿಂದ ಡಿ) ಪ್ರತಿವಾದಿ ಪರ ಶ್ರೀ.ಯು ಕೆ ವಕೀಲರಿಂದ</u>

3 ನೇ ಪ್ರತಿವಾದಿ ನನಗೆ ಏನಾಗಬೇಕು ಎಂದರೆ ಸಾಕ್ಷಿಯು ನನ್ನ ತಂದೆಯ ಅಣ್ಣ ಎಂದು ನುಡಿಯುತ್ತಾರೆ. ವಾದಿ, ಪ್ರತಿವಾದಿ 1 ಮತ್ತು 2 ರವರಿಗೆ 3 ನೇ ಪ್ರತಿವಾದಿಯು ಅಣ್ಣನಾಗಬೇಕಾ ಎಂದರೆ ಹೌದು. ಈ ದಾವೆ ಯಾರು ಹಾಕಿರುತ್ತಾರೆ ಎಂದರೆ ಸಾಕ್ಷಿ ವಿರುಧ್ಧಪಾಕ್ಷಪ್ಪರವರು ಎಂದು ನುಡಿಯುತ್ತಾರೆ. ವಾದಿಯು ನನ್ನ ಅಥವಾ 2 ನೇ ಪ್ರತಿವಾದಿಯ ವಿರುದ್ಧ ಯಾವುದಾದರೂ ಪರಿಹಾರ ಕೇಳಿದ್ದಾರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ವಾದಿ ಮತ್ತು 2 ನೇ ಪ್ರತಿವಾದಿಯ ಹೇಳಿಕೆ ಮೇರೆಗೆ ನಾನು ಪ್ರತಿವಾದ ಪತ್ರದಲ್ಲಿ ಮತ್ತು ಮುಖ್ಯವಿಚಾರಣೆಯ ಪ್ರಮಾಣ ಪತ್ರವನ್ನು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ವಾದಿಗೆ ಮತ್ತು 2 ನೇ ಪ್ರತಿವಾದಿಗೆ ಅನುಕೂಲವಾಗುವ ಅಂಶಗಳನ್ನು ಮಾತ್ರ ನಾನು ಪ್ರತಿವಾದ ಪತ್ರದಲ್ಲಿ ಮತ್ತು ಮುಖ್ಯವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದ ಪತ್ರದಲ್ಲಿ ಮತ್ತು ಮುಖ್ಯವಿಚಾರಣೆಯ ಪ್ರಮಾಣ ಪತ್ರದಲ್ಲಿರುವ ಅಂಶಗಳನ್ನು ವಾದಿಯು ತನ್ನ ವಾದಪತ್ರದಲ್ಲಿ ತಿಳಿಸಿಲ್ಲ ಎಂದರೆ ಸರಿ. ನನ್ನ ಪ್ರತಿವಾದ ಪತ್ರಕ್ಕೆ ಮತ್ತು ಮುಖ್ಯವಿಚಾರಣೆಯ ಪ್ರಮಾಣ ಪತ್ರಕ್ಕೆ ವಾದಿಯು ಮಾಹಿತಿ ನೀಡಿದ್ದಾರಾ ಎಂದರೆ ಸಾಕ್ಷಿ ನನ್ನ ತಂದೆಯವರು ಮಾಹಿತಿ ನೀಡಿರುತ್ತಾರೆ ಎಂದು ನುಡಿಯುತ್ತಾರೆ.

ನನ್ನ ತಂದೆ ಲೋಕೇಶಪ್ಪ, ವಾದಿ ಹಾಗೂ ಪ್ರತಿವಾದಿ 1 ರಿಂದ 3 ರವರ ತಂದೆಯ ಹೆಸರು ಎಂದರೆ ಶಿವಪ್ಪ ಎಂದು ನುಡಿಯುತ್ತಾರೆ. ಶಿವಪ್ಪರವರಿಗೆ ಸಂಬಂಧಿಸಿದ ಯಾವುದೇ ನೋಂದಾಯಿತ ವಿಭಾಗ ಪತ್ರ ಆಗಿಲ್ಲ ಎಂದರೆ ಸಾಕ್ಷಿಯು ಜುಬಾನೆ ಹಿಸ್ಸೆ ಆಗಿದೆ ಎಂದು ನುಡಿಯುತ್ತಾರೆ. ಜುಬಾನೆ ಹಿಸ್ಸೆ ಪ್ರಕಾರ ಯಾವುದೇ ಖಾತೆ, ಪಹಣಿ ಆಗಿಲ್ಲ ಎಂದರೆ ಸಾಕ್ಷಿ ಆಗಿದೆ ಎಂದು ನುಡಿಯುತ್ತಾರೆ. ಯಾವ ಖಾತೆ ಪಹಣಿ ಆಗಿದೆ ಎಂದರೆ ಸಾಕ್ಷಿಯು ಎಂ ಆರ್ ನಂ.5/89-90 ರಂತೆ 2 ನೇ ಪ್ರತಿವಾದಿಯ ಹೆಸರಿಗೆ 1 ಅಂಕಣದ ಮನೆ, ಖಾತೆ ನಂ.86/1 3 ನೇ ಪ್ರತಿವಾದಿಯ ಹೆಸರಿಗೆ 1 ಅಂಕಣದ ಮನೆ, ಖಾತಾ ನಂ.46/2 ನನ್ನ ತಂದೆಗೆ 1 ಅಂಕಣದ ಮನೆ ಖಾತೆ ಆಗಿರುತ್ತದೆ ಎಂದು ನುಡಿಯುತ್ತಾರೆ. ನಿಡಿ 41 ಮ್ಯುಟೇಷನ್ ಎಂ ಆರ್ ನಂ.5/89-90 ಕ್ಕೆ ಸಂಬಂಧಿಸಿದ್ದು ಅದರಲ್ಲಿ ನಾನು ಈ ಮೇಲೆ ಹೇಳಿದ ಮನೆಗಳ ವಿಚಾರ ನಮೂದಾಗಿಲ್ಲ ಎಂದರೆ ಸರಿ.

ಯಾವ ಸ್ವತ್ತಿಗೆ ಸಂಬಂಧಿಸಿದಂತೆ ವಾದಿ ದಾವೆ ಹಾಕಿರುತ್ತಾರೆ ಎಂದರೆ ಸಾಕ್ಷಿಯು ಸರ್ವೆ ನಂ.112/1 ರಲ್ಲಿ 13 ಗುಂಟೆಗೆ ಎಂದು ನುಡಿಯುತ್ತಾರೆ. ಸರ್ವೆ ನಂ.112 ರಲ್ಲಿ ಒಟ್ಟು ಎಷ್ಟು ಎಕರೆ ಇದೆ 39 ಗುಂಟೆ ಎಂದು ನುಡಿಯುತ್ತಾರೆ. ಸರ್ವೆ ನಂ.112 ರ ಪಹಣಿಯು ಇಂದಿಗೂ ಸಹ ಜಂಟಿ ಹೆಸರಿನಲ್ಲಿದೆ ಎಂದರೆ ಸಾಕ್ಷಿಯು ಈಶ್ವರಪ್ಪ ಬಿನ್ ಹನುಮಂತಪ್ಪ, 2 ನೇ ಪ್ರತಿವಾದಿ, ವಾದಿ ರವರ ಹೆಸರಿಗೆ ಇದೆ ಎಂದು ನುಡಿಯುತ್ತಾರೆ. ಸರ್ವೆ ನಂ.112 ರ ಜಮೀನು ಯಾವುದೇ ವಿಭಾಗ ಆಗಿಲ್ಲ ಅದು ಇಂದಿಗೂ ಸಹ ಒಟ್ಟು ಕುಟುಂಬದ ಆಸ್ತಿ ಎಂದರೆ ಸರಿಯಲ್ಲ. ನನ್ನ ವಿರುದ್ಧ ವಾದಿ ಯಾವುದೇ ಪರಿಹಾರ ಕೇಳದೇ ಇದ್ದರೂ ಸಹ ವಾದಿ ಮತ್ತು 2 ನೇ ಪ್ರತಿವಾದಿಯ ಮಾತು ಕೇಳಿ ನಾನು ಅವರಿಗೆ ಅನುಕೂಲವಾಗುವಂತಹ ಪ್ರತಿವಾದ ಪತ್ರ ಮತ್ತು ಮುಖ್ಯವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ